ನನ್ನಲಿರುವ ರೂಕ್ಷತೆಯನ್ನು ನಾಶ ಮಾಡಿ, ಸಂಸಾರವನ್ನು ವಿಶ್ವಾಸದಡಿಯಲ್ಲಿ ಬೆಳೆಯುವಂತೆ ಮಾಡಿ ಹಿರಿಮೆಯನ್ನು ತಂದುಕೊಟ್ಟವಳು ಅವಳು.' ಅವರಿಗೆ ನಾಲ್ವರು ಮಕ್ಕಳು. ಅನಂತಸ್ವಾಮಿ ಮತ್ತು ಅರುಣ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದವರು. ಇವರಲ್ಲಿ ಅರುಣ ಬರವಣಿಗೆಯಲ್ಲಿ ತೊಡಗಿಕೊಂಡವರು. ತಂದೆಯ ಎಲ್ಲಾ ಪುಸ್ತಕ, ಹಸ್ತಪ್ರತಿಗಳನ್ನು ಸಂಗ್ರಹಿಸಿ ಅದಕ್ಕೆ ಒಂದು ರೂಪವನ್ನು ಕೊಡುತ್ತಾ ಬಂದವರು. ಹೆಣ್ಣು ಮಕ್ಕಳು ಪ್ರಭಾ ಮತ್ತು ರೋಹಿಣಿ.

## ಜಿ.ವಿ ಎಂಬ ಆಲ್‌ರೌಂಡರ್

ಮೈಸೂರು ವಿದ್ಯಾರ್ಥಿ ಸಂಘದ ಒಂದು ವಾರ್ಷಿಕೋತ್ಸವ ಕಾರ್ಯಕ್ರಮ. ಡಾ. ಎಸ್. ರಾಧಾಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಸ್ಪರ್ಧೆ ನಡೆಯುವಾಗಲೂ ಜಿ.ವಿ ಮೊದಲಿಗರು. ಆಟದ ಸ್ಪರ್ಧೆಯಲ್ಲಿಯೂ ಮೊದಲಿಗರು. ಬಹುಮಾನ ವಿತರಣೆ ನಡೆಯುವಾಗ ರಾಧಾಕೃಷ್ಣನ್ ಜಿ.ವಿಯವರ ಬೆನ್ನು ತಟ್ಟಿ 'good at both' ಎಂದಿದ್ದರು. ಚೆಸ್, ಕೇರಂ ಆಟಗಳಲ್ಲಿ ಅವರು ಪರಿಣತರು. ಒಳ್ಳೆಯ ಈಜುಗಾರರೂ ಹೌದು. ಕನ್ಯಾಕುಮಾರಿಗೆ ಪ್ರವಾಸ ಹೋಗಿದ್ದಾಗ ಉಸಿರು ಬಿಗಿ ಹಿಡಿದು ಸಮುದ್ರದ ನೀರ ಮೇಲೆ ಶವಾಸನದಲ್ಲಿ ತೇಲಿದ್ದನ್ನ ಮಗಳು ರೋಹಿಣಿ ನೆನಪು ಮಾಡಿಕೊಳ್ಳುತ್ತಾರೆ. ಮೊಮ್ಮಗಳು ಮಾನಸಾಗೆ ಅವರೇ ಬ್ಯಾಡ್ಮಿಂಟನ್ ಕೋಚ್! ಇವರ ಗರಡಿಯಲ್ಲಿ ಪಳಗಿ ಆಕೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದಾಗ ಅವಳ ಕೌಶಲ್ಯ ಕಂಡು, 'ನಿಮ್ಮ ಕೋಚ್ ನ್ಯಾಷನಲ್ ಲೆವಲ್ ಪ್ಲೇಯರ್‍ರಾ' ಎಂದು ಎಲ್ಲರೂ ಕೇಳಿದ್ದರಂತೆ. ಜಿ.ವಿ ಉತ್ತಮ ಕಲಾವಿದರು. ನಾಟಕಕಾರ ಪರ್ವತವಾಣಿ ಜಿ.ವಿಯವರನ್ನೇ ಗಮನದಲ್ಲಿ ಇಟ್ಟುಕೊಂಡು ನಾಟಕಗಳನ್ನು ಬರೆದಿದ್ದೂ ಇದೆ. ಕುತೂಹಲದ ಸಂಗತಿ ಎಂದರೆ ಅಸಾಧಾರಣ ಪಂಡಿತರಾದ ಜಿ.ವಿಯವರು ನಾ. ಕಸ್ತೂರಿಯವರ ನಾಟಕದಲ್ಲಿ ಪೆದ್ದಗುಂಡನ ಪಾತ್ರವನ್ನು ನಿರ್ವಹಿಸಿದ್ದರಂತೆ. ಅವರಿಗೆ ಪ್ರಿಯವಾದ ಹವ್ಯಾಸಗಳಲ್ಲಿ ತೋಟಗಾರಿಕೆ ಕೂಡ ಒಂದು. ಹಿಂದೆ ಬಾಡಿಗೆ ಮನೆಯಲ್ಲಿ ಇದ್ದಾಗ ಸುತ್ತಲೂ ಬೇಕಾದಷ್ಟು ಜಾಗವಿತ್ತು. ಜಿ.ವಿಯವರು ಗುದ್ದಲಿ ಹಿಡಿದು ಕೃಷಿ ಆರಂಭಿಸಿಯೇ ಬಿಟ್ಟರು. ತೆಂಗು ನೆಟ್ಟರು, ಲಾನ್ ಬೆಳೆಸಿದರು. ಗುಲಾಬಿ, ಮಲ್ಲಿಗೆ, ದಾಳಿಂಬೆ, ಸೀತಾಫಲ, ಬಾಳೆ ಹೀಗೆ ಹೂ–ಹಣ್ಣುಗಳನ್ನು ಬೆಳೆಸಿದರು.

ಜಿ. ವೆಂಕಟಸುಬ್ಬಯ್ಯ ಕೊನೆಯವರೆಗೂ ಶಿಸ್ತಿನ ಜೀವನವನ್ನು ನಡೆಸಿದವರು. ಬೆಳಗಿನ ಜಾವ ಐದು ಗಂಟೆಗೆ ಎದ್ದು ಕಾಫಿ ಡಿಕಾಕ್ಷನ್ ಹಾಕಿ ಇತರರಿಗೂ ಎತ್ತಿಟ್ಟು, ತಾವು ಕುಡಿದು, ಉಣ್ಣೆ ಬಟ್ಟೆಗಳಿಂದ ಸಾಲಂಕೃತರಾಗಿ ವಾಕಿಂಗ್ ಹೊರಟು ಬಿಡುತ್ತಿದ್ದರು. ಚಳಿ ಇರಲಿ, ಮಳೆ ಇರಲಿ ಈ ಹವ್ಯಾಸವನ್ನು ಅವರು ಎಂದಿಗೂ ತಪ್ಪಿಸಿದವರಲ್ಲ. ಬೆಳಗ್ಗೆ 7.30ಕ್ಕೆ ಸರಿಯಾಗಿ ವಾಪಸ್ ಬಂದು ಬಿಡುತ್ತಿದ್ದರು. ಮಧ್ಯಾಹ್ನ ಮಡದಿಯ ಬಳಿ ಕುಳಿತು ಸಾಹಿತ್ಯ–ಸಂಸಾರದ ವಿಷಯಗಳನ್ನು ಮಾತಾಡುತ್ತಿದ್ದರು. ಕೊನೆಯ ಒಂದು ವರ್ಷ ಮಾತ್ರವೇ ಕೊರೊನಾದ ಕಾರಣದಿಂದ ಈ ಕ್ರಮ ತಪ್ಪಿದ್ದು. ಈ ಶಿಸ್ತು ಕೂಡ ಅವರ ದೀರ್ಘಾಯುಷ್ಯದ ಗುಟ್ಟಿನಲ್ಲಿ ಒಂದಾಗಿದೆ.

ಅವರಿಗೆ ಬಡ ವಿದ್ಯಾರ್ಥಿಗಳಲ್ಲಿ ಅಕ್ಕರೆ; ಸಾಕಷ್ಟು ಧನ ಸಹಾಯ ಮಾಡಿದ್ದಾರೆ. ವಾರನ್ನದ ಆಶ್ರಯ ನೀಡಿದ್ದಾರೆ, ಪ್ರತಿಭಾವಂತರಿಗೆ ಕೆಲಸ ಕೊಡಿಸಿದ್ದಾರೆ. ತಾಯಿ ಇಲ್ಲದ ಹೆಣ್ಣುಮಕ್ಕಳಿಗೆ ಸಂಬಂಧ ಕುದುರಿಸಿ ಮದುವೆ ಕೂಡ ಮಾಡಿದ್ದಾರೆ. ಎಂ.ಬಿ. ಗೋಪಾಲಸ್ವಾಮಿ ಅವರು 'ರಾಮಕೃಷ್ಣ ಸ್ಟುಡೆಂಟ್ ಹೋಂ' ಎನ್ನುವ ಉಚಿತ ವಿದ್ಯಾರ್ಥಿ ನಿಲಯಕ್ಕೆ ಅವರನ್ನು ಪರಿಚಯ ಮಾಡಿಕೊಟ್ಟರು. ಅಲ್ಲಿ ಮೊದಲಿಗೆ ಅವರು ಬಡ ವಿದ್ಯಾರ್ಥಿಗಳಿಗೆ ಪಾಠ ಹೇಳಲು ಶುರು ಮಾಡಿದರು. ಕ್ರಮೇಣ ಅದರ ಭಾಗವೇ ಆಗಿ ಬಿಟ್ಟರು. 35 ವರ್ಷ ಅದರ ಅಧ್ಯಕ್ಷರಾಗಿ ಅವರು ಕಾರ್ಯ ನಿರ್ವಹಿಸಿದರು.